<u>ಹಿರಿಯ ದಿವಾಣಿ ನ್ಯಾಯಾಲಯ, ಕುಂದಗೋಳ</u>

<u>ಸಿ.ಸಿ. ನಂ. **16/2021** ಸಿ. ಡಬ್ಲ್ಯೂ: **7** ಪಿ ಡಬ್ಲ್ಯೂ ಃ **7**</u>

ಸಾಕ್ಷಿಯ ಹೆಸರು ಃ ಉಮೇಶ ಹುರಳಿಕೊಪ್ಪಿ

ತಂದೆಯ ಹೆಸರು ಃ ಮಾರ್ತಂಡಪ್ಪ.

ವಯಸ್ಸು ಃ 40 ವರ್ಷ

ಉದ್ಯೋಗ ಃ ವ್ಯವಸಾಯ.

ವಾಸಸ್ಥಳ ಃ ಚಿಕ್ಕಗುಂಜಾಳ.

ದಿನಾಂಕಃ 26/10/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಮುಖ್ಯ ವಿಚಾರಣೆಃ ಸಸಅ ರವರಿಂದ</u>

1. ಚಾಸಾ 5 ಮತ್ತು 6 ನನ್ನ ಅಣ್ಣಂದಿರು. ಆರೋಪಿ ಗೊತ್ತು. ಈ ಪ್ರಕರಣದಲ್ಲಿ ಚಾಸಾ 1 ದೂರು ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಕೆ ವಿ ಜಿ ಬ್ಯಾಂಕಿನಲ್ಲಿ ಬೆಳೆ ಸಾಲ ತೆಗೆದುಕೊಂಡಿದ್ದರು. ಆರೋಪಿ ನನಗೆ ಮತ್ತು ನನ್ನ ಸಹೋದರರಿಗೆ ಬೆಳೆ ಸಾಲವನ್ನು ಮಂಜೂರು ಮಾಡಿ ರೂ. 2,00,000 ಹಣವನ್ನು ದುರುಪಯೋಗ ಮಾಡಿಕೊಂಡಿರುವುದಿಲ್ಲ. ಸಾಕ್ಷಿ ಬ್ಯಾಂಕ ಮಾನೇಜರಗೆ ನೀಡಿದ ಅರ್ಜಿಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5 ಎ ಎಂದು ಗುರುತಿಸಲಾಯಿತು.

<u>**(**ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷಿ ನುಡಿದಿದ್ದ ಕಾರಣ ಸ ಸ ಅ ಅವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ನೀಡಿಲಾಯಿತು**.)**</u>

<u>ಪಾಟೀ ಸವಾಲು**:** ಮಾನ್ಯ ಸ ಸ ಅ ರವರಿಂದ ಃ</u>

2. 2011 ರಲ್ಲಿ ನಾನು ಮತ್ತು ಚಾಸಾ 5 ಮತ್ತು 6 ಸೇರಿ ಕೆ ವಿ ಜಿ ಬ್ಯಾಂಕಿಗೆ ಹೋಗಿ ನಮ್ಮ ತಂದೆಯವರ ಸಾಲವನ್ನು ಚುಕ್ತಾ ಮಾಡಲು ನಿರ್ಧರಿಸಿದ್ದು ನಾನು ಬ್ಯಾಂಕ ಮಾನೇಜರಗೆ ರೂ. 80,000 ಸಾಲವನ್ನು ಬೆಳೆ ಸಾಲವಾಗಿ ಮಂಜೂರು ಮಾಡುವ ಬಗ್ಗೆ ಅದರಂತೆ ಚಾಸಾ 6 ಅವರ ಹೆಸರಿನ ಮೇಲೆ ರೂ. 60,000 ಬೆಳೆ ಸಾಲ ಮಂಜೂರು ಮಾಡುವಂತೆ ಬ್ಯಾಂಕಿಗೆ ಅರ್ಜಿ ಕೊಟ್ಟಿದ್ದು ಆರೋಪಿಯ ಬೆಳೆ ಸಾಲವನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ತಂದೆಯನ್ನು ಬ್ಯಾಂಕಿಗೆ ಕರೆದುಕೊಂಡು ಹೋಗಿ ಹಣ ಪಡೆಯುವ ಬ್ಯಾಂಕಿನ ಸ್ಲೀಪ ಮೇಲೆ ನನ್ನ ಹೆಬ್ಬಟ್ಟು ಸಹಿ ಪಡೆದುಕೊಂಡಿದ್ದು ಚಾಸಾ 6 ಹೆಸರಿನ ಮೇಲೆ ರೂ. 80,000 ಸಾಲ

ಮಂಜೂರಾಗಿರುವ ವಿಚಾರ ಗೊತ್ತಾಗಿದ್ದು ಆ ಕಾಲಕ್ಕೆ ಬ್ಯಾಂಕಿ ಮ್ಯಾನೇಜರ ಆಗಿದ್ದ ಆರೋಪಿ ನನ್ನ ತಂದೆಯ ಹೆಸರಿನ ಮೇಲೆ ಬಾಕಿ ಇದ್ದ ಬೆಳೆ ಸಾಲ ಖಾತೆಗೆ ಈ ಹಣ ಜಮಾ ಮಾಡುತ್ತೇನೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಅವರ ಮಾತಿನ ಮೇಲೆ ವಿಶ್ವಾಸ ಇಟ್ಟು ಸದರಿಯವರು ನನ್ನ ತಂದೆಯ ಸಾಲದ ಖಾತೆಗೆ ರೂ. 80,000 ಸಾಲ ಜಮಾ ತೆಗೆದುಕೊಳ್ಳುತ್ತಾರೆ ಎಂದು ತಿಳಿದೇವು ಎಂದರೆ ಸರಿಯಲ್ಲ. ಚಾಸಾ 5 ಮತ್ತು 6 ಅವರ ಹೆಸರಿಗೆ ರೂ. 60,000 ಬೆಳೆ ಸಾಲ ಮಂಜೂರು ಮಾಡಿ ನನಗೆ ಹೇಳಿದಂತೆ ನನ್ನ ತಂದೆಯವರ ಬೆಳೆ ಸಾಲ ಚುಕ್ತಾ ಮಾಡಿದ್ದಾರೆ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಬೆಳೆ ಸಾಲ ಮಂಜೂರು ಮಾಡಲು ಕೊಟ್ಟ ಅರ್ಜಿಯಲ್ಲಿ ನನ್ನ ಹೆಬ್ಬಟ್ಟಿನ ಸಹಿಗಳು ನನ್ನದೇ ಇರುತ್ತವೆ ಹಾಗೂ ದಿಃ06/08/2011 ರಂದು ಬ್ಯಾಂಕಿಗೆ ಹಣ ಪಡೆಯುವ ಸ್ಲೀಪನಲ್ಲಿ ನನ್ನ ಹೆಬ್ಬಟ್ಟಿನ ಸಹಿಗಳು ಇದ್ದು ಈ ಸಹಿಗಳನ್ನು ನಾನೇ ಮಾಡಿರುತ್ತೇನೆ. ಸದರಿ ಹಣವನ್ನು ನಾನಾಗಲಿ ಅಥವಾ ನನ್ನ ಅಣ್ಣಂದಿರಾಗಲಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಹಣವನ್ನು ನಮ್ಮ ತಂದೆಯವರ ಸಾಲದ ಖಾತೆಗೆ ಜಮಾ ತೆಗೆದುಕೊಂಡಿರುವುದಿಲ್ಲ ಎಂದು ನನ್ನ ಅಣ್ಣನಿಂದ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಸದರಿ ಹಣವನ್ನು ಆರೋಪಿ ತನ್ನ ಸ್ವಂತಕ್ಕೆ ದುರುಪಯೋಗ ಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

3. ಆರೋಪಿ ರೈತರು ಕೊಟ್ಟಂತಹ ಬೆಳೆ ಸಾಲದ ಅಸಲು ಮತ್ತು ಬಡ್ಡಿ ಹಣವನ್ನು ಮತ್ತು ಬ್ಯಾಂಕಿನ ಹಣವನ್ನು ಸ್ವಂತಕ್ಕೆ ಬಳಸಿಕೊಂಡು ಖೊಟ್ಟಿ ದಾಖಲೆಯ ಮುಖಾಂತರ ಬ್ಯಾಂಕಿನ ಹಣವನ್ನು ಸ್ವಂತಕ್ಕೆ ಪಡೆದು ದುರುಪಯೋಗ ಮಾಡಿಕೊಂಡು ಆರೋಪ ಎಸಗಿರುತ್ತಾನೆ ಎಂದು ನನಗೆ ತಿಳಿಯಿತು ಎಂದರೆ ಸರಿಯಲ್ಲ. ಬ್ಯಾಂಕಿನವರು ನನಗೆ ವಿಚಾರಣೆಗೆ ಕರೆಯಿಸಿದಾಗ ನನ್ನ ತಂದೆಯವರ ಸಾಲದ ಖಾತೆಯಲ್ಲಿ ಚಾಸಾ 5 ಮತ್ತು 6 ಅವರಿಗೆ ಬೆಳೆ ಸಾಲ ಎಂದು 2011 ರಲ್ಲಿ ಮಂಜೂರು ಮಾಡಿದ ರೂ. 2,00,000 ಹಣವನ್ನು ಆರೋಪಿ ನಮಗೆ ಸಾಲ ಮಂಜೂರು ಮಾಡಿ ನಮ್ಮ ತಂದೆಯವರ ಸಾಲದ ಖಾತೆಯಿಂದ ಜಮಾ ತೆಗೆದುಕೊಳ್ಳದೇ ಬಾಕಿ ಇಟ್ಟು ನಮಗೆ ಮಂಜೂರು ಮಾಡಿದ ಹಣವನ್ನು ಬ್ಯಾಂಕಿಗೆ ಮತ್ತು ನಮಗೆ ಮೋಸ ಮಾಡುವ ಉದ್ದೇಶದಿಂದ ಸ್ವಂತಕ್ಕೆ ದುರುಪಯೋಗ ಮಾಡಿಕೊಂಡಿರುತ್ತಾನೆ ಎಂದು ಬ್ಯಾಂಕಿನಲ್ಲಿ ವಿಚಾರಣೆ ಮಾಡುವ ಅಧಿಕಾರಿಗಳಿಂದ ತಿಳಿಯಿತು ಎಂದರೆ ಸರಿಯಲ್ಲ. ವಿಚಾರಣಾ ಅಧಿಕಾರಿಗಳ ಕಡೆಗೆ ನಾನು ಆರೋಪಿಯ ಮೇಲೆ ಅವ್ಯವಹಾರ ಮಾಡಿ ನಮಗೆ ಮೋಸ ಮಾಡಿದ ಬಗ್ಗೆ ಲಿಖಿತ ದೂರು ಸಲ್ಲಿಸಿರುವ ಬಗ್ಗೆ ತಿಳಿಯಿತು ಎಂದರೆ ಸರಿಯಲ್ಲ.

4. ಆರೋಪಿ ನಮ್ಮ ತಂದೆಯವರ ಬೆಳೆ ಸಾಲ ತೀರಿಸುತ್ತೇನೆ ಎಂದು ಹೇಳಿ ನಂಬಿಸಿ ನನ್ನ ಮತ್ತು ನನ್ನ ಅಣ್ಣಂದಿರ ಹೆಸರಿನಲ್ಲಿ ಮೇಲೆ ಒಟ್ಟು ರೂ. 2,00,000 ಹಣವನ್ನು ಬೆಳೆ ಸಾಲವಾಗಿ ಮಂಜೂರು ಮಾಡಿ ಸದರಿ ಹಣವನ್ನು ನಮ್ಮ ತಂದೆಯವರ ಸಾಲದ ಖಾತೆಗೆ ಜಮಾ ತೆಗೆದುಕೊಳ್ಳದೇ ಇರುವುದರಿಂದ ಬಾಕಿ ಹಣದಲ್ಲಿ ಆರೋಪಿಯು ದಿಃ11/06/2015 ರಂದು ರೂ.1,69,310 ಅಸಲು ಬಡ್ಡಿ ಸಮೇತ ಸೇರಿ ಬ್ಯಾಂಕಿನಲ್ಲಿ ನಮ್ಮ ತಂದೆಯವರ ಖಾತೆಗೆ ಜಮಾ ಪಾವತಿ ಮುಖಾಂತರ ಜಮಾ ಮಾಡಿದ ವಿಚಾರ ನನಗೆ ನಂತರ ಗೊತ್ತಾಯಿತು ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಸಹೋದರರು ನಮ್ಮ ತಂದೆಯವರ ಹೆಸರಿನಲ್ಲಿ ಬಾಕಿ ಇದ್ದ ಬೆಳೆ ಸಾಲದ ಹಣವನ್ನು ದಿಃ11/06/2015 ರಂದು ರೂ. 2,89,000 ಬೆಳೆ ಸಾಲದ ಹಣವನ್ನು ಚುಕ್ತಾ ಮಾಡಿರುತ್ತೇವೆ ಎಂದರೆ ಸರಿಯಲ್ಲ.

5. ನನ್ನ ಅಣ್ಣಂದಿರ ಹೆಸರಿನ ಮೇಲೆ ಆರೋಪಿ ಬೆಳೆ ಸಾಲ ಮಂಜೂರು ಮಾಡಿ ಒಟ್ಟು ರೂ. 2,00,000 ಹಣವನ್ನು ತನ್ನ ಸ್ವಂತಕ್ಕೆ ದುರುಪಯೋಗ ಪಡಿಸಿಕೊಂಡು ಈ ಹಣವನ್ನು ನಮ್ಮ ತಂದೆಯವರ ಸಾಲದ ಖಾತೆಗೆ ಜಮಾ ತೆಗೆದುಕೊಳ್ಳದೇ ನನಗೆ ಹಾಗೂ ಬ್ಯಾಂಕಿಗೆ ನಂಬಿಕೆ ದ್ರೋಹ ಮಾಡಿ ದುರುಪಯೋಗ ಮಾಡಿಕೊಂಡಿದ್ದು ಈ ವಿಚಾರವನ್ನು ಆರೋಪಿ ಒಪ್ಪಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಾನು ಈ ಘಟನೆಯ ವಿಚಾರವಾಗಿ ಈಗ ಓದಿ ಹೇಳಿದಂತೆ ನಿಪಿ.6 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ.6 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ (ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.)

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.